ಕನ್ನಡಪ್ರಭ

Thursday, January 12, 2012

# ಜೈನ್ ವಿವಿ ಕ್ರೀಡಾಕೂಟ: ಪ್ರೆಸಿಡೆನ್ಸಿ ಕಾಲೇಜ್‌ಗೆ ಜಯ

**ಬೆಂಗಳೂರು:** ನಗರದ ಜೈನ್ ಯೂನಿವರ್ಸಿಟಿಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಕ್ರೀಡಾಕೂಟದ ಕ್ರಿಕೆಟ್‌ನ ಫೈನಲ್ ಪಂದ್ಯದಲ್ಲಿ ಚೆನ್ನೈನ ಪ್ರೆಸಿಡೆನ್ಸಿ ಕಾಲೇಜ್ 36 ರನ್‌ಗಳ ಅಂತರದಿಂದ ವಿಜಯ ಸಾಧಿಸಿತು. ಮೊದಲು ಬ್ಯಾಟ್ ಮಾಡಿದ ಜೈನ್ ಪ್ರೆಸಿಡೆನ್ಸಿ ಕಾಲೇಜ್ ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 237 ರನ್ ಗಳಿಸಿತು. ನಂತರ ಈ ಮೊತ್ತವನ್ನು ಬೆನ್ನಟ್ಟಿದ ಅತಿಥೇಯ ಜೈನ್ ಯೂನಿವರ್ಸಿಟಿ 43 ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 201 ರನ್ ಗಳಿಸುವ ಮೂಲಕ ಕೈಚೆಲ್ಲಿತು. ಇನ್ನು ತೀವ್ರ ಪೈಪೋಟಿಯಿಂದ ನಡೆದ ವಾಲಿಬಾಲ್ ಫೈನಲ್ ಪಂದ್ಯದಲ್ಲಿ ಸತ್ಯಭಾಮ ಕಾಲೇಜ್ ವಿರುದ್ಧ ಎಸ್‌ಆರ್‌ಎಂ ಕಾಲೇಜ್ 3–2 ಪಾಯಿಂಟ್‌ಗಳ ಅಂತರದಿಂದ ಜಯದ ಕೇಕೆ ಹಾಕಿತು.

ಹಾಕಿ ಫೈನಲ್ ಪಂದ್ಯದಲ್ಲಿ ಡಿ.ಪಿ ಜೈನ್ ಕಾಲೇಜ್ ತಂಡವನ್ನು ಅಣ್ಣಾಮಲೈ ಯೂನಿವರ್ಸಿಟಿ ತಂಡ 3–1 ಗೋಲುಗಳ ಅಂತರದಿಂದ ಪರಾಭವಗೊಳಿಸಿತು. ಅಣ್ಣಾಮಲೈ ಯೂನಿವರ್ಸಿಟಿ ಪರ ಪಂದ್ಯದ 30ನೇ ಮತ್ತು 53ನೇ ನಿಮಿಷದಲ್ಲಿ ರೆಪ್ಪಿ ಹಾಗೂ 43ನೇ ನಿಮಿಷದಲ್ಲಿ ಮನೋಜ್ ಗೋಲು ಗಳಿಸಿದರು. ಡಿ.ಪಿ ಜೈನ್ ಕಾಲೇಜ್ ಪರ ಪಂದ್ಯದ 45ನೇ ನಿಮಿಷದಲ್ಲಿ ರಾಜ್‌ಕುಮಾರ್ ಮಾತ್ರ ಗೋಲು ಗಳಿಸಿದರು.